**CC 10601/2024**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್ 10601/2024**

**ಸಿ ಡಬ್ಲೂ 1**

**ಪಿ ಡಬ್ಲೂಃ 1**

**ಸಾಕ್ಷಿಯ ಹೆಸರು - ಶಿವಕುಮಾರ ನಾಯ್ಕ**
**ತಂದೆಯ ಹೆಸರು - ಕೆ ವೆಂಕಾ ನಾಯ್ಕ**
**ವಯಸ್ಸು - 36 ವರ್ಷಗಳು**
**ಉದ್ಯೋಗ - ಪಿ ಎಸ್ ಐ ಬಡಾವಣೆ ಪೋಲಿಸ್ ಠಾಣೆ**
**ವಾಸಸ್ಥಳ - ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ 06-03-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು ಆಗಸ್ಟ **2023** ರಿಂದ ಫೆಬ್ರುವರಿ **2025** ರವರೆಗೆ ಹಂಪಿ ಪ್ರವಾಸಿ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **01-10-2024** ರಂದು ನಾನು ಕಡ್ಡಿರಾಂಪುರ ಗ್ರಾಮದಲ್ಲಿ ರೌಂಡ್ಸ್ ಕರ್ತವ್ಯದಲ್ಲಿದ್ದಾಗ ಕಡ್ಡಿರಾಂಪುರ ಕ್ರಾಸ್ ಹತ್ತಿರ ಯಾರೋ ಒಬ್ಬ ವ್ಯಕ್ತಿ ಅಕಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದಾನೆ ಎಂದು ಬಾತ್ಮಿ ಬಂದಿತ್ತು. ಮಾಹಿತಿಯ ಆಧಾರದ ಮೇಲೆ ಠಾಣೆಗೆ ಹೋಗಿ **4.00** ಗಂಟೆಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿ ದೂರು ನೋಡಿ ಗುರುತಿಸಿದ್ದು, ಅದನ್ನು ನಿಪಿಃ **1** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **(ಎ)** ಎಂದು ಗುರುತಿಸಲಾಯಿತು. ಸದರಿ ದೂರಿನ ಅನ್ವಯ ಠಾಣಾ ಗುನ್ನೆ ಸಂಖ್ಯೆ **28/2024** ಪ್ರಕರಣ ದಾಖಲಾಗಿರುತ್ತದೆ.

ನಂತರ ದಾಳಿ ಮಾಡುವ ವಿಚಾರವಾಗಿ, ಪತ್ರಾಂಕಿತ ಅಧಿಕಾರಿ ಚಾಸಾ **-6** ರವರನ್ನು ಠಾಣೆಗೆ ಕರೆಸಿಕೊಂಡೆವು. ಪ್ರಕರಣದ ಪಂಚರಾದ ಚಾಸಾ **-2** ಮತ್ತು **3** ರವರನ್ನು ಠಾಣೆಗೆ ಕರೆಸಿಕೊಂಡೆವು. ಚಾಸಾ **-2** ಮತ್ತು **3** ರವರಿಗೆ ನೋಟಿಸ ಅನ್ನು ನೀಡಿ ಪ್ರಕರಣದ ಮಾಹಿತಿ ಒದಗಿಸಿರುತ್ತೇನೆ. ದಾಳಿ ಮಾಡಲು

ಮತ್ತು ವ್ಯಕ್ತಿಯ ಅಂಗಶೋಧನೆ ಮಾಡಲು ಡಿ.ವಾಯ್.ಎಸ್.ಪಿ ರವರಿಗೆ ಅನುಮತಿ ಮತ್ತು ಶೋಧನಾ ವಾರಂಟ್‌ಗಳನ್ನು ಕೇಳಿರುತ್ತೇನೆ. ಸಾಕ್ಷಿ ಡಿ.ವಾಯ್.ಎಸ್.ಪಿ ರವರಿಗೆ ಬರೆದ ಪತ್ರ ಮತ್ತು ಡಿ.ವಾಯ್.ಎಸ್.ಪಿ ನೀಡಿರುವ ವಾರಂಟ್ ಅನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪತ್ರವನ್ನು ನಿಪಿಃ 2 ಎಂದು, ವಾರಂಟ್ ಅನ್ನು ನಿಪಿಃ 3 ಎಂದು ಗುರುತಿಸಲಾಯಿತು. ದಾಳಿ ಸಂದರ್ಭದಲ್ಲಿ ತೂಕ ಮಾಡಲು ಚಾಸಾ -14 ರವರಿಗೆ ಹಾಜರಿರಲು ನೋಟಿಸ್ ನೀಡಿ ಕರೆಸಿಕೊಂಡಿರುತ್ತೇನೆ.

ಸಂಜೆ 4.30 ಗಂಟೆಗೆ ಸಿಬ್ಬಂದಿಗಳು ತಮ್ಮ ದ್ವಿಚಕ್ರ ವಾಹನಗಳಲ್ಲಿ ಮತ್ತು ಠಾಣೆಯ ಜೀಪಿನಲ್ಲಿ ನನ್ನೊಂದಿಗೆ ಪಂಚರು ಮತ್ತು ಪತ್ರಾಂಕಿತ ಅಧಿಕಾರಿ ಮತ್ತು ಚಾಸಾ -14 ರವರು ಹೋಗಿರುತ್ತೇವೆ. ಬಾತ್ಮಿ ಬಂದಿದ್ದ ಸ್ಥಳಕ್ಕೆ ಸಂಜೆ 4.50 ಗಂಟೆಗೆ ಹೊಸೇಗಿರುತ್ತೇವೆ. ಸ್ವಲ್ಪ ದೂರದಲ್ಲಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ಯಿಾವುದೋ ವಸ್ತುವನ್ನು ಮಾರಾಟ ಮಾಡುತ್ತಿರುವುದನ್ನು ಖಚಿತಪಡಿಸಿಕೊಂಡೆವು. ಸದರಿ ವ್ಯಕಿತ ನಮ್ಮನ್ನು ನೋಡಿ ಒಡಿ ಹೋಲಗಲು ಪ್ರಯತ್ನಿಸಿದ. ಆವ್ಯವಿಕ್ತಿಯನ್ನು ಸಿಬ್ಬಂದಿಗಳ ಸಹಾಯಿದಿಂದ ಹಿಡಿದಿರುತ್ತೇನೆ. ಆತನನ್ನು ಹಿಡಿದು ವಿಚಾರಿಸಿದಾಗ ತನ್ನ ಹೆಸರು ವಿರುಪಾಕ್ಷಿ, ಆಟೋ ಚಾಲಕ, ಪ್ರಕಾಶ್ ನಗರ ಎಂದು ತಿಳಿಸಿದ. ಆತನ ಬಳಿ ಇದ್ದ ಒಂದು ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ ಗಾಂಜಾದಂತೆ ವಾಸನೆ ಬರುತ್ತಿದ್ದ ಎಲೆಗಳು ಹಾಗೂ ಬೀಜಗಳು ಇದ್ದದ್ದು ಕಂಡುಬಂದಿತು. ಸದರಿ ವ್ಯಕ್ತಿಗೆ ಅಂಗಶೋಧನೆ ನೋಟಿಸ್ ಅನ್ನು ನೀಡಿ ಮ್ಯಾಜಿಸ್ಟ್ರೇಟ್ ಮುಂದೆ ಅಂಗಶೋಧನೆ ಆಗಬೇಕೋ ಅಥವಾ ಪತ್ರಾಂಕಿತ ಅಧಿಕಾರಿಯ ಮುಂದೆ ಆಗಬೇಕೋ ಎಂದು ಪ್ರಶ್ನಿಸಿದಾಗ ಆತ ಪತ್ರಾಂಕಿತ ಅಧಿಕಾರಿಯ ಮುಂದೆಯೇ ಅಂಗಶೋಧನೆ ಆಗಬೇಕು ಎಂದು ಕೇಳಿಕೊಂಡ. ಆತನ ಅಂಗಶೋಧನೆ ಮಾಡಿದಾಗ ಯಾವುದೇ ವಸ್ತು ಕಂಡುಬರಲಿಲ್ಲ. ಆತನ ಬಳಿ ಪ್ಲಾಸ್ಟಿಕ್ ಕವರ್ ನಲ್ಲಿ ಇದ್ದ ಗಾಂಜಾವನ್ನು ತೂಕ ಮಾಡಿದಾಗ ಪ್ಲಾಸ್ಟಿಕ್ ಸಮೇತ

160 ಗ್ರಾಂ ಇತ್ತು. ಗಾಂಜಾವನ್ನು ಮಾತ್ರ ತೂಕ ಮಾಡಿದಾಗ 155 ಗ್ರಾಂ ಇತ್ತು. ಸದರಿ ಗಾಂಜಾವನ್ನು ಅದೇ ಪ್ಲಾಸ್ಟಿಕ್ ಕವರ್ ನಲ್ಲಿ ಹಾಕಿ ಒಂದು ಬಿಳಿ ಚೀಲದಲ್ಲಿ ಪ್ಯಾಕ್ ಮಾಡಿ ಅದಕ್ಕೆ ಎಸ್.ಎಚ್.ಒ ಸೀಲ್ ಹಾಕಿರುತ್ತೇವೆ. ಸದರಿ ಮುದ್ದೆಮಾಲಿನ ಮೇಲೆ ಚೀಟಿಯನ್ನು ಅಂಟಿಸಿ ಪಂಚರ ಮತ್ತು ಪತ್ರಾಂಕಿತ ಅಧಿಕಾರಿಯ ಸಹಿಯನ್ನು ಪಡೆದಿರುತ್ತೇವೆ. ಈ ಎಲ್ಲಾ ಪ್ರಕ್ರಿಯೆಗಳನ್ನು ಸಂಜೆ 5.00 ಗಂಟೆಯಿಂದ 7.00 ಗಂಟೆಂವರೆಗೆ ಜರುಗಿಸಲಾಗಿತ್ತು.

ಈಗ ನಾನು ನೋಡುತ್ತಿರುವ ಪಂಚನಾಮೆ ಅದೇ ಆಗಿರುತ್ತದೆ. ಸಾಕ್ಷಿ ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿಃ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 4(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ನಕಾಶೆಯನ್ನು ಮತ್ತು ಫೋಟೋಗಳನ್ನು ತೆಗೆಸಲಾಗಿತ್ತು. ಸಾಕ್ಷಿ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ 5 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 5(ಎ) ಎಂದು ಗುರುತಿಸಲಾಯಿತು. ಸಾಕ್ಷಿ 4 ಫೋಟೋ ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿಃ 6 ಎಂದು ಗುರುತಿಸಲಾಯಿತು. ನಂತರ ಮುದ್ದೆಮಾಲನ್ನು ತೆಗೆದುಕೊಂಡು ಆರೋಪಿಯನ್ನು ಕರೆದುಕೊಂಡು ಠಾಣೆಗೆ ಹಿಂತಿರುಗಿ ತನಿಖಾಧಿಕಾರಿಯ ವಶಕ್ಕೆ ನೀಡಿರುತ್ತೇನೆ. ತನಿಖಾಧಿಕಾರಿಯ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಪಂಚನಾಮೆ ಕಾಲಕ್ಕೆ ವಿಡಿಯೋ ಮಾಡಲಾಗಿತ್ತು. ಸದರಿ ವಿಡಿಯೋವನ್ನು ಚಾಸಾ -23 ರವರು ತೆಗೆದಿರುತ್ತಾರೆ. ವಿಡಿಯೋವನ್ನು ಸಿಡಿ ಒಂದರಲ್ಲಿ ಹಾಕಿ ಚಾಸಾ -23 ರವರಿಗೆ ಕೊಟ್ಟಿರುತ್ತೇನೆ. ಸಾಕ್ಷಿ ಸಿಡಿ ನೋಡಿ ಗುರುತಿಸಿದ್ದು, ಅದನ್ನು ನಿಪಿಃ 7 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡೀದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಆರ್.ಎಸ್ ವಕೀಲರಿಂದ**

ಬಾತ್ಮಿದಾರರು ಆ ದಿನ ಮೊದಲ ಬಾರಿಗೆ ಬಾತ್ಮಿಯನ್ನು ನೀಡಿದ್ದರು. ಬಾತ್ಮಿ ದೂರವಾಣಿ ಮುಖಾಂತರ ಕೊಟ್ಟಿದ್ದರು. ಬಾತ್ಮಿ ನಮ್ಮ ಕಚೇರಿಯಿಂದ

ನೀಡಲಾದ ಫೋನಿಗೆ ಬಂದಿತು. ಬಾತ್ಮಿದಾರರು ಎಷ್ಟು ಜನ ಗಾಂಜಾ ಮಾರಾಟ ಮಾಡುತ್ತಿದ್ದಾರೆ ಎಂದು ಹೇಳಿರಲಿಲ್ಲ. ನಿಪಿಃ 1 ಅನ್ನು ಠಾಣೆಯಲ್ಲಿನ ಸಿಬ್ಬಂದಿಯೊಬ್ಬರಿಂದ ಟೈಪ್ ಮಾಡಿಸಿರುತ್ತೇನೆ. ಸದರಿ ಸಿಬ್ಬಂದಿಯ ಹೆಸರು ನನಗೆ ನೆನಪಿಲ್ಲ. ನಿಪಿಃ 2 ರ ವಿಷಯದಲ್ಲಿ ವ್ಯಕ್ತಿಯ ಮೇಲೆ ಎಂದು ಹಾಗೂ ಪತ್ರದ 5 ನೇ ಸಾಲಿನಲ್ಲಿ ವ್ಯಕ್ತಿಗಳು ಎಂದು ನಮೂದಾಗಿದೆ ಅಂದರೆ ಸರಿ. ಬಾತ್ಮಿದಾರರು ಸ್ಥಳದಲ್ಲಿ ಎಷ್ಟು ವ್ಯಕ್ತಿಗಳು ಮಾರಾಟ ಮಾಡುತ್ತಿದ್ದರು ಎಂದು ಮಾಹಿತಿ ನೀಡಿರಲಿಲ್ಲ ಅಂದರೆ ಸರಿ.  ಬಾತ್ಮಿದಾರರು ಸ್ಥಳಕ್ಕೆ ಬಂದು ಆರೋಪಿಯನ್ನು ಗುರುತಸಿಲಿಲ್ಲ ಅಂದರೆ ಸರಿ. ಬಾತ್ಮಿದಾರರು ಗಾಂಜಾ ಮಾರಾಟ ಮಾಡುತ್ತಿರುವ ವ್ಯಕ್ತಿಯ ಮುಖ ಚಹರೆ ಮತ್ತು ಆತನ ಎತ್ತರ ಹಾಗೂ ಮೈಬಣ್ಣವನ್ನು ಹೇಳಿರಲಿಲ್ಲ. ಬಾತ್ಮಿ ಬಂದ ನಂತರ ಸಿಬ್ಬಂದಿಯನ್ನು ಸ್ಥಳಕ್ಕೆ ಕಳುಹಿಸಿ ಪ್ರಾಥಮಿಕ ತನಿಖೆ ಮಾಡಿರುವುದಿಲ್ಲ. ದೂರಿನೊನಂದಿಗೆ ಪಂಚರಿಗೆ ನೀಡಿದ ನೋಟಿಸ್, ಪತ್ರಾಂಕಿತ ದಲಅಧಿಕಾರಿಗೆ ನೀಡಿದ ಪತ್ರ ಮತ್ತು ಡಿ ವಾಯ್ ಎಸ್ ಪಿ ರವರಿಗೆ ಬರೆದ ಪತ್ರಗಳನ್ನು ತಯಾರಿಸಿದ್ದೆ.

ಪತ್ರಾಂಕಿತ ಅಧಿಕಾರಿಯನ್ನು ಠಾಣೆಗೆ ಕರೆಯಿಸಿ ನೋಟಿಸ್ ನೀಡಿರುತ್ತೇನೆ. ಚಾಸಾ -2 ಮತ್ತು 3 ರವರಿಗೂ ಸಹ ಠಾಣೆಯಲ್ಲಿ ನೋಟಿಸ್ ಜಾರಿ ಮಾಡಿಸಿರುತ್ತೇನೆ. ಸದರಿ ನೋಟಿಸ್ ಗಳನ್ನು ಪಂಚರು ಬಂದ ನಂತರ ತಯಾರಿಸಿರಲಿಲ್ಲ. ಸದರಿ ಪಂಚರನ್ನು ಮತ್ತು ಪತ್ರಾಂಕಿತ ಅಧಿಕಾರಿಯನ್ನು ಠಾಣೆಗೆ ಕರೆಯಿಸಿ ನೋಟಿಸ್ ಕೊಡಲು 10-15 ನಿಮಿಷ ಸಮಯ ಹಿಡಿಯಿತು. ಸದರಿಯವರನ್ನು ದೂರವಾಣಿ ಕರೆ ಮಾಡಿ ಠಾಣೆಗೆ ಕರೆಸಿದ್ದೆ. ಸದರಿಯವರ ದೂರವಾಣಿ ಸಂಖ್ಯೆಗಳೆಲ್ಲಾ ನಮ್ಮ ಠಾಣೆಯಲ್ಲಿ ಲಭ್ಯವಿದ್ದವು. ಪಂಚರಿಗೆ ಘಟನೆಯ ಬಗ್ಗೆ ನಾನೇ ಮಾಹಿತಿ ನೀಡಿರುತ್ತೇನೆ.

ಪಂಚನಾಮೆ ಬರೆಯಲು ಪಂಚರೇ ಮಾಹಿತಿ ನೀಡಿರುತ್ತಾರೆ. ಪಂಚನಾಮೆಯನ್ನು ಸ್ಥಳದಲ್ಲಿ ಟೈಪ್ ಮಾಡಿಸಿ ಠಾಣೆಗೆ ಹಿಂತಿರುಗಿ ಪ್ರಿಂಟ್ ತೆಗೆದು

ಠಾಣೆಯಲ್ಲಿಯೇ ಎಲ್ಲರ ಸಹಿಯನ್ನು ಮಾಡಿಲಾಗಿದೆ. ಘಟನಾ ಸ್ಥಳ ಜನಸಂದಣಿಯಿಂದ ಕೂಡಿದ ಸ್ಥಳ ಅಂದರೆ ಸರಿ. ಸದರಿ ಸ್ಥಳದ ಚೆಕ್ಕು ಬಂದಿ ಗೊತ್ತು. ಘಟನಾ ಸ್ಥಳದಲ್ಲಿನ ಕಮಾನ್ ಅಕ್ಕಪಕ್ಕದಲ್ಲಿ ಮತ್ತು ಹಿಂದೆ ಹೋಟಲ್ ಹಾಗೂ ಪಾನ್ ಶಾಪ್ ಗಳು ಇರುತ್ತವೆ ಅಂದರೆ ಸರಿ. ಸದರಿ ಸ್ಥಳದಲ್ಲಿ ಸಾಮಾನ್ಯವಾಗಿ ಗೈಡ್ ಗಳು ಮತ್ತು ಹೋಂ ಸ್ಟೇ ಎಜೆಂಟ್ ಗೆಲ್ಲಾ ಕುಳಿತಿರುತ್ತಾರೆ ಅಂದರೆ ಸರಿ.  ಸಾಕ್ಷಿ ಮುಂದುವರೆದು ಆ ದಿನ ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ಹೋಟಲ್ ಮತ್ತು ಪಾನ್ ಶಾಪ್ ಅಂಗಡಿಯವರಿಗೆ ಪಂಚರಾಗಿ ಸಹಕರಿಸುವಂತೆ ಕೇಳಿರಲಿಲ್ಲ. ಸಾಕ್ಷಿ ಮುಂದುವರೆದು ಹೋಟಲ್, ಎಳೇನೀರು ಅಂಗಡಿ ಮತ್ತು ಪಾನ್ ಶಾಪ್ ನವರು ಸಹ ಇರಲಿಲ್ಲ ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ಮಧ್ಯಾಹ್ನ **2.30** ಗಂಟೆಯಿಂದ **4.30** ಗಂಟೆಗೆ ಊಟಕ್ಕೆ ತೆರಳುತ್ತಾರೆ ಅಂದರೆ ಸರಿಯಲ್ಲ. ಪ್ರತಿಯೊಂದು ಸರಕಾರದಿಂದ ವಿಡಿಯೋ ಕ್ಯಾಮೆರಾ ಮತ್ತು ಬಾಡಿ ಕ್ಯಾಮೆರಾವನ್ನು ಕೊಟ್ಟಿರುತ್ತಾರೆ ಅಂದರೆ ಸರಿ. ಸಿಡಿಯಲ್ಲಿ ಪಂಚನಾಮೆ ಮಾಡಿದ ಫೋಟೊ ಮತ್ತು ವಿಡಿಯೋ ಇರುತ್ತವೆ, ಸದರಿ ಸಿಡಿಯಲ್ಲಿ ಫೋಟೊಗಳು ಮಾತ್ರ ಇರುತ್ತವೆ ಅಂದರೆ ಸರಿಯಲ್ಲ. ಕ್ಯಾಮೆರಾದಲ್ಲಿ ಫೋಟೋ ತೆಗೆದಾಗ ಸ್ಥಳದ ಮಾಹಿತಿ ಮತ್ತು ಫೋಟೋ ತೆಗೆದ ಸಮಯ ನಮೂದಾಗುತ್ತದೆ ಅಂದರೆ ಸರಿ. ನಿಪಿಃ **6** ರ ಫೋಟೋಗಳಲ್ಲಿ ಸ್ಥಳ ಮತ್ತು ನಮೂದಾಗಿಲ್ಲ ಅಂದರೆ ಸರಿ.

ತೂಕದ ಯಂತ್ರದ ಉದ್ದಗಲ ನನಗೆ ಗೊತ್ತಿಲ್ಲ. ಸದರಿ ಯಂತ್ರ ಬಾಳೆಕಾಯಿ ವ್ಯಾಪಾರ ಮಾಡುವವರು ಉಪಯೋಗಿಸುವುದಿಲ್ಲ ಅಂದರೆ ನನಗೆ ಗೊತಿತಲ್ಲ. ಸದರಿ ಯಂತ್ರ ಕೆಲಸ ಮಾಡುತ್ತಿತ್ತೊ ಇಲ್ಲವೋ ಎಂಬುದಿನ್ನು ನಾನು ಪರೀಶಿಲಿಸಿರುತ್ತೇನೆ. ಸದರಿ ಯಂತ್ರವನ್ನು ಆನ್ ಮತ್ತು ಅಫ್ ಮಾಡುವ ಮೂಲಕ ಪರೀಶಿಲಿಸಿರುತ್ತೇನೆ. ಕಬ್ಬಿಣದ ತೂಕದ ಕಲ್ಲು ಇಟ್ಟು ಪರೀಶಿಲಿಸಬೇಕಾಗುತತದೆ ಅಂದರೆ ಸರಿಯಲ್ಲ. ನಾನು ತೂಕ ಮತ್ತು ಅಳತೆ ಇಲಾಖೆಯವರಿಗೆ ತೂಕ

**CC 10601/2024**

ಮಾಡಲು ಸಹಕರಿಸಿ ಎಂದು ಪತ್ರ ಬರೆದಿರಲಿಲ್ಲ. ಗಾಂಜಾ ಗುರುತಿಸಲು ನಾನು ತರಬೇತಿಯನ್ನು ಪಡೆದಿರುತ್ತೇನೆ. ಸದರಿ ತರಬೇತಿಯಲ್ಲಿ ವಿಶೇಷವಾಗಿ ಪ್ರಮಾಣ ಪತ್ರವನ್ನು ನೀಡಿರುವುದಿಲ್ಲ. ವಿಡಿಯೋ ವನ್ನು ಸರಕಾರದಿಂದ ಕೊಟ್ಟ ಕ್ಯಾಮೆರಾದಿಂದ ತೆಗೆದಿರಲಿಲ್ಲ. ನಾವು ಆರೋಪಿ ತದ್ದ ಸ್ಥಳದದಿಂದ **10-15** ಮೀಟರ್ ಅಂತರದಲ್ಲಿ ನಿಂತು ನೋಡಿದ್ದೇವು. ಆ ರೀತಿ **5-10** ನಿಮಿಷಗಳ ಕಾಲ ನೋಡಿರುತ್ತೇವೆ. ವಾಹನವನ್ನು ಸಹ **10-15** ಮೀಟರ್ ದೂರದಲ್ಲಿಯೇ ನಿಲ್ಲಿಸಿದ್ದೇವು. ಆರೋಪಿ ಬಳಿ ಗಾಂಜಾ ಖರೀದಿಸಲು ಜನ ಬಂದಿದ್ದರು, ಅವರು ನಮ್ಮನ್ನು ನೋಡಿ ಒಡಿ ಹೋಗಿದ್ದರು. ನನ್ನ ಹೇಳಿಕೆಯಲ್ಲಿ ಆರೋಪಿ ಚೀಲದಿಂದ ಗಾಂಜಾದಂತಹ ಸೊಪ್ಪು ತೆಗೆದು ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದ ಎಂದು ನಮೂದಿಸಲಾಗಿದೆ ಅಂದರೆ ಸರಿ.

ಮುಂದುವರೆದ ಪಾಟೀಸವಾಲಿಗೆ ನ್ಯಾಯಾಲಯದ ಸಮಯ ಮುಗಿದಿದ್ದರಿಂದ, ಮುಂದುಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.